ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ಅದನ್ನು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಇ) ವಿಷಯ : ಹಾಸನ ತಾಲ್ಲೂಕಿನ ಚಿಕ್ಕಕೊಂಡಗುಳ ಗ್ರಾಮದ ಸರ್ವೆ ನಂಬರ್ 73ರಲ್ಲಿನ ಒಂದು ಎಕರೆ ಜಮೀನನ್ನು ಸರ್ಕಾರದ ಉಪಯೋಗಕ್ಕೆ ಮೀಸಲಿಡುವ ಕುರಿತು :

ಶ್ರೀ ಹೆಚ್.ಎಸ್. ಪ್ರಕಾಶ್ (ಹಾಸನ) : ಮಾನ್ಯ ಅಧ್ಯಕ್ಷರೆ, ಹಾಸನ ತಾಲ್ಲೂಕಿನ ಚಿಕ್ಕಕೊಂಡಗುಳ ಗ್ರಾಮದ ಸರ್ವೆ ನಂಬರ್ 73ರಲ್ಲಿನ ಒಂದು ಎರಕೆ ಜಮೀನನ್ನು ಸರ್ಕಾರದ ಉಪಯೋಗಕ್ಕೆ ಮೀಸಲಿಡುವ ಕುರಿತು ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ,

ಹಾಸನ ತಾಲ್ಲೂಕು, ಚಿಕ್ಕಕೊಂಡಗುಳ ಗ್ರಾಮದ ಸ.ನಂ.73ರಲ್ಲಿ 1.00 ಎಕರೆ ಜಮೀನನ್ನು ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 105 ಎಲ್‌ಜಿಪಿ 77, ದಿ: 01.09.1977 ರನ್ವಯ ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸುವಂತೆ ಸಲ್ಲಿಸಿದ ಮನವಿಯ ಮೇರೆಗೆ ತಹಶೀಲ್ದಾರರು ಟಿಟಿಸಿ 26/78–79, ದಿ: 20.12.1978ರಲ್ಲಿ ಶ್ರೀ ಹೆಚ್. ವೆಂಕಟಕೃಷ್ಣಪ್ಪ ಇವರಿಗೆ ಮಂಜೂರು ಮಾಡಿ ಹಂಗಾಮಿ ಸಾಗುವಳಿ ಚೀಟಿ ನೀಡಲಾಗಿರುತ್ತದೆ. ನಂತರ ಸದರಿ ಜಮೀನಿಗೆ ದಿ: 12.07.1993ರಲ್ಲಿ ಖಾಯಂ ಸಾಗುವಳಿ ಚೀಟಿ ನೀಡಲಾಗಿರುತ್ತದೆ. ನಂತರ ಮುಂಜೂರಿದಾರರ ಪಾವತಿ ನಂತರ ಅವರ ವಾರಸುದಾರರಾದ ಶ್ರೀಮತಿ ಸುಶೀಲ ಕೋಂ ಶ್ರೀನಿವಾಸಮೂರ್ತಿರವರಿಗೆ ಹಕ್ಕು ದಾಖಲಾಗಿರುತ್ತದೆ.

ಈ ಜಮೀನಿನ ಮಂಜೂರಾತಿಯನ್ನು ಶ್ರೀ ಬಿ.ಟಿ. ಗಿರಿಜಾ ಶಂಕರ್ ಮತ್ತು ಇತರರು ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯನ್ನು ತಿರಸ್ಕರಿಸಿ ಸಂಬಂಧಪಟ್ಟ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲು ಆದೇಶಿಸಲಾಗಿರುತ್ತದೆ.

ಈ ಬಗ್ಗೆ ಗಿರಿಜಾ ಶಂಕರ್ ಮತ್ತು ಇತರರು ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣದಲ್ಲಿ ಅಪೀಲು ಸಂಖ್ಯೆ:266/94ರಂತೆ ಮೇಲ್ಮನವಿ ಸಲ್ಲಿಸಿದ್ದು, ದಿ: 17.04.1996ರ ಮೇಲ್ಮನವಿ ತಿರಸ್ಕರಿಸಲಾಗಿರುತ್ತದೆ.

ಈ ಬಗ್ಗೆ ಮಂಜೂರಿದಾರರು ಕಿರಿಯ ವಿಭಾಗದ ಸಿವಿಲ್ ನ್ಯಾಯಾಲಯದಲ್ಲಿ ಶಾಶ್ವತ ನಿರ್ಬಂಧಕಾಜ್ಞೆಯನ್ನು ಕೋರಿ ಓ.ಎಸ್. 194/95ರಲ್ಲಿ ಅರ್ಜಿ ಸಲ್ಲಿಸಿದ್ದು, ಈ ಬಗ್ಗೆ ದಿ: 27.06.2003ರ ಆದೇಶದಲ್ಲಿ ಮಂಜುರಾತಿ ಜಮೀನಿಗೆ ಅಡಚಣೆಯನ್ನು ಉಂಟುಮಾಡದಂತೆ ಆದೇಶಿಸಲಾಗಿರುತ್ತದೆ.

ನಂತರ ಶ್ರೀ ಗಿರಿಜಾ ಶಂಕರ್ ಮತ್ತು ಇತರರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:17716/96ರಂತೆ ಅರ್ಜಿ ಸಲ್ಲಿಸಿದ್ದು, ದಿ: 29.06.1999ರ ಆದೇಶದಲ್ಲಿ ರಿಟ್ ಅರ್ಜಿದಾರರುಗಳಿಗೆ ರೂ.1000/–ಗಳ ದಂಡ ವಿಧಿಸಿ ರಿಟ್ ಅರ್ಜಿ ವಜಾಗೊಳಿಸಲಾಗಿರುತ್ತದೆ.

ಈ ಬಗ್ಗೆ ರಿಟ್ ಅರ್ಜಿದಾರರು ಪುನಃ ರಿಟ್ ಅಪೀಲು ಸಂಖ್ಯೆ: 7356/99ರಂತೆ ರಿಟ್ ಅಪೀಲು ಸಲ್ಲಿಸಿದ್ದು, ರಾಜ್ಯ ಉಚ್ಚ ನ್ಯಾಯಾಲಯವು ದಿ: 15.11.2000ರ ಆದೇಶದಲ್ಲಿ ರಿಟ್ ಅಪೀಲನ್ನು ವಜಾಗೊಳಿಸಿರುತ್ತದೆ.

ಮೇಲ್ಕಂಡ ಎಲ್ಲಾ ನ್ಯಾಯಾಲಯಗಳಲ್ಲಿಯೂ ಸದರಿ ಜಮೀನಿನ ಮಂಜೂರಾತಿಯನ್ನು ಎತ್ತಿಹಿಡಿದಿದ್ದು, ಈ ಬಗ್ಗೆ ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ ಇವರು ದಿ: 17.11.08ರ ಪತ್ರದಲ್ಲಿ ಸರ್ಕಾರದ ನಿರ್ದೇಶನ ಕೋರಿದ ಮೇರೆಗೆ ಸರ್ಕಾರದ ಪತ್ರ ಸಂಖ್ಯೆ: ಆರ್‌ಡಿ 60 ಎಲ್‌ಜಿಹೆಚ್ 2008, ದಿ: 19.12.2008ರ ಆದೇಶದಲ್ಲಿ ಪ್ರಸ್ತಾಪಿತ ಹಾಸನ ತಾಲ್ಲೂಕು, ಚಿಕ್ಕಕೊಂಡಗುಳ ಗ್ರಾಮದ ಸ.ನಂ.73ರಲ್ಲಿ 1.00 ಎಕರೆ ಜಮೀನನ್ನು ಶ್ರೀ ಹೆಚ್.ಎಸ್. ವೆಂಕಟಕೃಷ್ಣಪ್ಪರವರಿಗೆ ಮಂಜೂರು ಮಾಡಿರುವುದನ್ನು ಪುನರ್ ಸ್ಥಾಪಿಸಲು (Restore) ಸರ್ಕಾರದ ಪೂರ್ವಾನುಮೋದನೆ ನೀಡಲಾಗಿರುತ್ತದೆ.

ಸದರಿ ಮಂಜೂರಾತಿಯನ್ನು ಪ್ರಶ್ನಿಸಿ ಶ್ರೀ ಬಿ.ವಿ. ರಾಮಚಂದ್ರ ಮತ್ತಿತರರು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ರಿಟ್ ಅರ್ಜಿ ಸಂಖ್ಯೆ: 24806 ಮತ್ತು 24807/09 ಸಲ್ಲಿಸಿದ್ದು, ಸದರಿ ಪ್ರಕರಣವು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿರುತ್ತದೆ.

ಅಧ್ಯಕ್ಷರು : ಈ ವಿಷಯ ಸಹ ನ್ಯಾಯಾಲಯದಲ್ಲಿದೆ.

ಶ್ರೀ ಹೆಚ್.ಎಸ್. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಈ ಜಾಗ ಹಾಸನ ನಗರದ ಮಧ್ಯ ಭಾಗದಲ್ಲಿದೆ. ಚದರ ಅಡಿಗೆ 2100 ರೂ. ಇದೆ. 1992 ರಲ್ಲಿ ವೆಂಕಟಕೃಷ್ಣಯ್ಯನವರು ತೀರಿ ಹೋದಮೇಲೆ 1993ರಲ್ಲಿ ಮಂಜೂರಾಗಿದೆ. ಮಾನ್ಯ ಕಂದಾಯ ಸಚಿವರಿಗೆ ಅಧಿಕಾರಿಗಳು ಮಾಹಿತಿ ಕೊಡುವಾಗ ತಪ್ಪು

ಮಾಹಿತಿ ಕೊಟ್ಟಿದ್ದಾರೆ. ಈ ಕೇಸ್ ವಜಾ ಮಾಡಬೇಕೆಂದು ಕೋರ್ಟಿನಲ್ಲಿ ಲಿಟಿಗೇಷನ್ ಇದೆ. ಆದರೆ, ಅದರಲ್ಲಿ ಸರ್ಕಾರ ಪಾರ್ಟಿ ಆಗಿಲ್ಲ. ಸರ್ಕಾರವನ್ನು ಅದರಲ್ಲಿ ಪಾರ್ಟಿ ಮಾಡಿ, ಅವಶ್ಯಕತೆ ಕಂಡು ಬಂದಲ್ಲಿ ಕಾನೂನು ವಿರುದ್ಧವಾಗಿ sanction ಮಾಡಿದ್ದರೆ ಸರ್ಕಾರ withdraw ಮಾಡಿಕೊಳ್ಳಬಹುದುದೆಂದು ಕೊಟ್ಟಿದ್ದಾರೆ. ಕೊಟ್ಟಾದ ಮೇಲೆ, 2009ರಲ್ಲಿ ಸನ್ಮಾನ್ಯ ಸಚಿವರು ಲಿಖಿತವಾಗಿ ಈ ಸರ್ಕಾರಿ ಜಮೀನನ್ನು ಮೋಸ ಮಾಡಿ ತೆಗೆದುಕೊಂಡಿದ್ದು, ತಕ್ಷಣ cancel ಮಾಡಿ ಖಾತೆ ಮಾಡಬೇಡಿ ಎಂದು ನಿಲ್ಲಿಸಿದ್ದಾರೆ. ಮತ್ತೆ 16/8ರಲ್ಲಿ ಖಾತೆ ಮಾಡಿಕೊಡಿ ಎಂದು ಆದೇಶ ಹೊರಡಿಸಿದ ಮೇಲೆ ಖಾತೆ ಆಗಿದೆ. ಕೋರ್ಟ್ ಆದೇಶ ಏನಿದೆ ಅದನ್ನು ಕೊಡುತ್ತೇವೆ. ಕೋರ್ಟಿನಲ್ಲಿ ಸರ್ಕಾರಕ್ಕೆ ಸರಿಯಾದ ಮಾಹಿತಿ ಕೊಟ್ಟಿದ್ದಾರೆ. ಸರ್ಕಾರದ ಜಮೀನು ಯಾವುದಿತ್ತು ಅದನ್ನು ಮೋಸದಲ್ಲಿ ಕಾನೂನು ಬಾಹಿರವಾಗಿ sanction ಆಗಿದ್ದರೆ cancel ಮಾಡಬಹುದು, ಸರ್ಕಾರಕ್ಕೆ ಆ ಅಧಿಕಾರವಿದೆ ಎಂದು Court ಆದೇಶ ಕೊಟ್ಟಿದೆ. ಮಂತ್ರಿಯವರು ಆ ಆದೇಶವನ್ನು ನೋಡಿ ನಂತರ ತಕ್ಕುದಾದ ರೀತಿಯಲ್ಲಿ ಕ್ರಮ ಕೈಗೊಳ್ಳಲಿ.

(ಗೊಂದಲ)

ಅಧ್ಯಕ್ಷರು : ಇದು ಗಮನ ಸೆಳೆಯುವ ಸೂಚನೆ. Court ನಲ್ಲಿ ಈ matter pending ನಲ್ಲಿದೆ.

ಶ್ರೀ ಹೆಚ್.ಡಿ. ರೇವಣ್ಣ : ನಾನು ನ್ಯಾಯಾಲಯದ ವಿಷಯವನ್ನೇ ಹೇಳುತ್ತಿದ್ದೇನೆ. ನ್ಯಾಯಾಲಯದ ವಿರುದ್ಧವಾಗಿ ಯಾವುದೂ ಹೇಳುತ್ತಿಲ್ಲ. ರಿಟ್ ಅಪೀಲು ಸಂಖ್ಯೆ 7356/99ರಂತೆ ಅರ್ಜಿ ಸಲ್ಲಿಸಿದ್ದು ರಾಜ್ಯ ಉಚ್ಚನ್ಯಾಯಾಲಯ ದಿನಾಂಕ: 15.11.2000ರ ಆದೇಶದಲ್ಲಿ ರಿಟ್ ಅಪೀಲು ಅನ್ನು ವಜಾಗೊಳಿಸಿದೆ. ಈ ಆದೇಶದ ಮೇಲೆ ಖಾತೆ ಮಾಡಿದ್ದೇವೆಂದು ಮಾನ್ಯ ಕಂದಾಯ ಸಚಿವರು ಹೇಳಿದರು. ಆದರೆ, ರಿಟ್ ಅರ್ಜಿಯನ್ನು ವಜಾ ಮಾಡುವಾಗ ಅದರಲ್ಲಿ ಸರ್ಕಾರ paryt ಇರಲಿಲ್ಲ. ಆದ್ದರಿಂದ, ಸರ್ಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಅವರಿಗೆ ಮಾಡಿ ಎಂದು ಹೇಳುವುದಕ್ಕೆ Court order ಇದೆಯೇ? ಗೋಪಾಲಕೃಷ್ಣ, ವೆಂಕಟಪ್ಪ ಎನ್ನುವವರಿಗೆ ಏನು ಖಾತೆ ಮಾಡಿದ್ದಾರೆ ಅದು ಸರ್ಕಾರಿ ಜಾಗವಾಗಿದೆ. ಅದೂ ಕೂಡ ಹಾಸನ ನಗರದಲ್ಲಿದೆ.

ಅಧ್ಯಕ್ಷರು : PIL ಹಾಕಿದ್ದಾರೆ. ಆ ಬಗ್ಗೆ ತೀರ್ಮಾನ ಬರಲಿ.

ಶ್ರೀ ಹೆಚ್.ಡಿ. ರೇವಣ್ಣ : Court ನಲ್ಲಿ ಇಲ್ಲ. ಏಕೆಂದರೆ, ಕಂದಾಯ ಮಂತ್ರಿಗಳ ಗಮನಕ್ಕೆ ಸರಿಯಾದ ರೀತಿಯಲ್ಲಿ ತಂದಿಲ್ಲ.

(ಗೊಂದಲ)

ಅಧ್ಯಕ್ಷರು : PIL pending ಇದೆ. ಈ ಹಂತದಲ್ಲಿ ಚರ್ಚೆ ಮಾಡುವುದು ಸೂಕ್ತವಲ್ಲ.

ಶ್ರೀ ಹೆಚ್.ಡಿ. ರೇವಣ್ಣ : ಕಾನೂನು ರೀತಿ ಕ್ರಮ ತೆಗೆದುಕೊಂಡು ಅದೇನು ಖಾತೆ ಇದೆ ಅದನ್ನು ವಜಾ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಜೆ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) : ಮಾನ್ಯ ಸಭಾಧ್ಯಕ್ಷರು ಹೇಳಿದ ಹಾಗೆ, ಅದು Court ನಲ್ಲಿ ಇದೆ. ಅಲ್ಲಿಂದ ಏನು ಬರುತ್ತದೆ ಎಂದು ನೋಡಿಕೊಂಡು ನಾವು ತೀರ್ಮಾನ ತೆಗೆದುಕೊಳ್ಳುತ್ತೇವೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ಕಂದಾಯ ಸಚಿವರು ಉತ್ತರ ಕೊಟ್ಟರು.

ಅಧ್ಯಕ್ಷರು : ಬೇಡ, Court ನಲ್ಲಿ ಇದೇ matter pending ನಲ್ಲಿರುವಾಗ ಮತ್ತೆ ಮತ್ತೆ ಕೇಳಿದರೆ ಹೇಗೆ?

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಕಾನೂನು ರೀತ್ಯಾ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಲಿ. ಖಾತೆ ಮಾಡಿರುವುದನ್ನು withdraw ಮಾಡಲಿ.

ಅಧ್ಯಕ್ಷರು : PIL pending ಇದೆ.

ಶ್ರೀ ಹೆಚ್.ಡಿ. ರೇವಣ್ಣ : pending ಇರಲಿ. ಇದೇ ಪ್ರಕಾರ ಖಾತೆ ಮಾಡಿದ್ದೇವೆಂದು ಹೇಳುತ್ತಾರೆ.

ಅಧ್ಯಕ್ಷರು : ಅದನ್ನೇ ಪ್ರಶ್ನೆ ಮಾಡಿ ಆ ವಿಷಯ Court ನಲ್ಲಿರುವಾಗ ಇಲ್ಲೇನು ಉತ್ತರ ಕೊಡುವುದು?

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಕಾನೂನುಬಾಹಿರವಾಗಿ ಮಾಡಿದಾಗ ಏನು ಮಾಡುತ್ತೀರಿ? ಕಂದಾಯ ಸಚಿವರು ಸಂಬಂಧಪಟ್ಟ Court order ಅನ್ನು ತರಿಸಿಕೊಂಡು ಇಲ್ಲಿ ಉತ್ತರ ಕೊಡಬೇಕು.

ಅಧ್ಯಕ್ಷರು : Court ನಲ್ಲಿ ಈ matter pending ಇರುವಾಗ ಮತ್ತೆ ಮತ್ತೆ ಕೇಳಿದರೆ ಹೇಗೆ? ನೀವು ಹಿರಿಯ ಸದಸ್ಯರಾಗಿ ಹೀಗೆ ಮಾತನಾಡಿದರೆ ನಾನು ಏನು ಮಾಡಬೇಕು?

ಶ್ರೀ ಹೆಚ್.ಡಿ. ರೇವಣ್ಣ : Court ನಲ್ಲಿ ಅವರ ಪರವಾಗಿ ಆಗಿಲ್ಲ. ಅದನ್ನು ದಾಖಲಾತಿ ಸಮೇತ ಪರಿಶೀಲನೆ ಮಾಡುವುದಕ್ಕೆ ಹೇಳಿ.

ಅಧ್ಯಕ್ಷರು : ಎರಡು PIL pending ಇದೆ. ಪರಿಶೀಲನೆ, ಇನ್ನೊಂದು ಏನೇ ಮಾಡಬೇಕಾದರೂ Court ನಲ್ಲಿ ತೀರ್ಮಾನವಾಗಬೇಕಲ್ಲವೇ?

ಶ್ರೀ ಹೆಚ್.ಡಿ. ರೇವಣ್ಣ : Court ನಿರ್ದೇಶನದಂತೆಯೇ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳಲಿ ಎಂದೇ ನಾನು ಹೇಳುತ್ತಿರುವುದು.

ಅಧ್ಯಕ್ಷರು : ಅದು ಆಗುವುದಿಲ್ಲ. ನೀವು ಹಿರಿಯ ಸದಸ್ಯರು. ನೀವು ಹೀಗೆ ನಿಯಮವನ್ನು ಉಲ್ಲಂಘನೆ ಮಾಡಿ ಉತ್ತರ ಕೊಡಿ ಎಂದರೆ ಹೇಗೆ? ನನಗೆ ಆಶ್ಚರ್ಯ ಆಗುತ್ತದೆ. ಇದನ್ನು ಇಲ್ಲಿಗೆ ಮುಕ್ತಾಯ ಮಾಡೋಣ.

ಅಧ್ಯಕ್ಷರು : ಅಭಯಚಂದ್ರ, ಯು.ಟಿ. ಖಾದರ್ ಮತ್ತು ಬಿ. ರಮಾನಾಥರೈರವರು ಕೇಳಿರುವ ಗಮನಸೆಳೆಯುವ ಸೂಚನೆಗೆ ಉತ್ತರ ಬಂದಿಲ್ಲ.

ಈ) ವಿಷಯ : ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ಮತ್ತು ಪುತ್ತೂರು ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಗೇರು ಹೂವಿನ ಮೇಲೆ ಸಿಂಪಡಿಸಿದ ಎಂಡೋಸಲ್ಫಾನ್‌ನಿಂದ ನಿಧನರಾದ ಹಾಗೂ ಶಾಶ್ವತ ಅಂಗವಿಕಲರಾದವರಿಗೆ ಪರಿಹಾರ ಮತ್ತು ಮಾಸಾಶನ ಕೊಡುವ ಬಗ್ಗೆ :

ಕುಮಾರಿ ಶೋಭಾ ಕರಂದ್ಲಾಜೆ (ಯಶವಂತಪುರ) : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ಮತ್ತು ಪುತ್ತೂರು ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಗೇರು ಹೂವಿನ ಮೇಲೆ ಸಿಂಪಡಿಸಿದ ಎಂಡೋಷಲ್ಫಾನ್‌ನಿಂದ